ISSN: 2393-8900 IMPACT FACTOR : 2.7825(UIF) VOLUME - 9 | ISSUE - 10 | JUNE - 2023

HISTORICITY RESEARCH JOURNAL

# ಕನ್ನಡ ಕಥಾ ಸಾಹಿತ್ಯ – ಒಂದು ಅವಲೋಕನ



ಡಾ. ಹುಲಿಗೆಮ್ಮ ಬಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೊಪ್ಪಳ.

**ಪ್ರಾಚಿನ ಕನ್ನಡ ಕಥೆಗಳು:–**

ಕನ್ನಡ ಕಥಾ ಸಾಹಿತ್ಯ ಪರಂಪರೆಗೆ ತನ್ನದೆ ಆದ ಪ್ರಾಚಿನ ಇತಿಯಾಸ ಹೋಂದಿದೆ. ಕನ್ನಡಕ್ಕೂ ಸಂಸ್ಕೃತಕ್ಕೂ ಒಂದಕ್ಕೊಂದು ಪರಸ್ಪರ ಸಂಬಂಧವಿದೆ. ಪ್ರಾರಂಭದಲ್ಲಿ ಕನ್ನಡ ಸಾಹಿತ್ಯಕ್ಕೆ ಜನಪದ ಸಾಹಿತ್ಯ ಪ್ರೇರಣೆ, ಪ್ರೋತ್ಸಾಹ ನಿಡಿದರೆ ಸಂಸ್ಕೃತದ ಸಾಹಿತ್ಯ ಕನ್ನಡವನ್ನು ಕೈಹಿಡಿದು ಬೆಳೆಸಿದೆ. ಸಂಸ್ಕೃತದ ಆದೇಷ್ಟೋ ಸಾಹಿತ್ಯ ಪ್ರೇರಣೆ ದೋರಣೆಯಿಂದಲೇ ಕನ್ನಡದಲ್ಲಿ ಸಮೃದ್ದವಾದ ಸಾಹಿತ್ಯ ಬೆಳೆದು ಬಂದಿದೆ. ಅದೇ ರೀತಿ ಕಥಾ ಸಾಹಿತ್ಯವು ಬೆಳೆದು ಬಂದಿದೆ. ಸಂಸ್ಕೃತದ ಗಾಥಾ ಶಬ್ದದ ತದ್ಭವ ರೂಪವೇ ಕಥೆ. ಇದರ ಅರ್ಥ 'ಹೇಳು' ಎಂದರ್ಥ ಈ ದೇಶದಲ್ಲಿ ಮೊದಲು ಹುಟ್ಟಿದ ಸಾಹಿತ್ಯವೇ ಮೌಖಿಕ ರೂಪದ ಜನಪದ ಕಥೆಗಳು ಮೊದಲು ರೂಪತಳೆದ ಮಾತು ಮುಂದೆ 'ಕಥೆ' ಆಯಿತು. ಆ ಕಥೆಯು ಸಾಹಿತ್ಯವಾಗಿ ವೇದ, ಶಾಸ್ತ್ರ, ಪುರಾಣ, ಮಾಹಾಕಾವ್ಯ ಆಗಿ ಉಪನಿಷತ್ತುಗಳಲ್ಲಿ ಹಾಸು ಹೋಕ್ಕಾಗಿ ಬೆರೆತುಹೋಯಿತು. ಮಾತು ಜನಪದ ಕಥೆಗಳಿಗೆ ಮೂಲವಾಗಿ ಜನಪದ ಕಥೆಗಳೇ ಕನ್ನಡದ ಪ್ರಾಚೀನ ಮಾರ್ಗಕಥಾ ಸೃಷ್ಟಿಗೆ ಮೂಲಕಾರಣವಾಯಿತು.

ಕನ್ನಡ ಕಥೆಗೆ ಪ್ರಾಚೀನ ಇತಿಹಾಸವಿದೆ ಎಂದು ಈ ಹಿಂದೆಯೇ ಹೇಳಲಾಗಿದೆ. ನಮಗೆ ದೊರೆಯುವ ಪ್ರಾಚೀನವಾದ ಮೊದಲ ಕಥಾ ಸಂಗ್ರಹವೆಂದರೆ 'ವಡ್ಡಾರಾಧನೆ' ಇದು ಜೈನ ಧರ್ಮದ ಕಥೆಗಳ ಸಂಗ್ರಹ. ಇದು 920 ರಲ್ಲಿ ರಚನೆಯಾಗಿರಬಹುದೆಂದು ನಂಬಲಾಗಿದೆ. ಈ ಕೃತಿಯಲ್ಲಿ 19 ಜೈನ ಯತಿಗಳ ಕಥೆಗಳು ಇವೆ. ಇದಕ್ಕೆ ಸಂಸ್ಕೃತದ ಹರಿಷೇಣನ 'ಕಥಾಕೋಶ' ಮೂಲ ಆಕರವಾಗಿದೆ. ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಇಲ್ಲಿಂದ ನಮಗೆ ಕನ್ನಡ ಕಥಾ ಸಾಹಿತ್ಯದ ಮಹಾಪುರವೇ ಹರಿದು ಬಂದಿರುವುದು ಕಂಡುಬರುತ್ತದೆ. ಕನ್ನಡದ 2ನೇ ಪ್ರಾಚೀನ ಕಥಾ ಸಂಗ್ರಹ ಕೃತಿಯಂದರೆ ಚಾವುಂಡರಾಯನ 'ತ್ರಿಶೆಷ್ಟಲಕ್ಷಣ ಪುರಾಣ' ಇದು ಕ್ರಿ.ಶ 979 ರಲ್ಲಿ ರಚನೆಯಾದ ಗದ್ಯ ಕೃತಿಯಾಗಿದೆ. ಈ ಕೃತಿಯಲ್ಲಿ ಜೈನ ಧರ್ಮದ 24 ತೀರ್ಥಂಕರ ಮತ್ತು 63 ಶಲಾಕ ಪುರುಷರ ಕಥೆಗಳಿವೆ. ಪ್ರಾಚಿನ ಕನ್ನಡದ 3 ನೇ ಕಥಾ ಸಂಗ್ರಹವೆಂದರೆ 'ದುರ್ಗಸಿಂಹನ ಪಂಚ ತಂತ್ರ ಇದು ಬಿಹಾರ ಪ್ರಾಂತದ 'ತಿರಾ' ಎಂಬಲ್ಲಿಯ ಜೈನ ಸಿದ್ಧಾಂತದ ಭವನದಲ್ಲಿರುವ ಒಂದು ಹಸ್ತ ಪ್ರತಿಯ ಒಂದು ಪದ್ಯದಿಂದ ರಚಿತವಾಗಿರುವ ಗದ್ಯ ಕೃತಿಯಾಗಿದೆ. ಇದು 1031 ರಲ್ಲಿ ರಚನೆಯಾಗಿದೆ ಎಂದು ವಿದ್ವಾಂಸರ ವಾದವಾಗಿದೆ. ಇದು ಗುಣಾಢ್ಯನಿಂದ ಪೈಶಾಚಿಕ ಭಾಷೆಯಲ್ಲಿ ರಚನೆಯಾಗಿರುವ ಚಿತ್ರಕಥೆಯನ್ನು ಆಧರಿಸಿ 'ವಸುಭಾಗಭಟ್ಟನು ತನ್ನ ಪಂಚಂತ್ರವನ್ನು ಬರೆದಿದ್ದಾನೆ. ಈ ಕೃತಿಯನ್ನು ಆಧರಿಸಿ ದುರ್ಗಸಿಂಹನು ತನ್ನ ಪಂಚತಂತ್ರವನ್ನು ಬರೆದಿದ್ದಾನೆ. ಈ ಕೃತಿಯಲ್ಲಿ ಅನೇಕ ಚಿಕ್ಕ ಚಿಕ್ಕ ಸಣ್ಣ ಕಥೆಗಳು ಬಂದು ಕಥೆಗಳೊಳಗೆ ಉಪಕಥೆಗಳು ಬೆಳೆದು ಬಂದಿವೆ.

**ನಡುಗನ್ನಡದ ಕಥೆಗಳು:–**

ನಡುಗನ್ನಡ ಕಾಲದಲ್ಲಿ ಈ ಪರಂಪರೆ ಮುಂದುವರೆದುಕೊಂಡು ಬಂದಿದೆ. ನಡುಗನ್ನಡ ಕಾಲದ ಮಹತ್ವದ ಕಥೆಗಳೆಂದರೆ ನಯಸೇನನ 'ಧರ್ಮಾಮೃತ' ಇದು ಕ್ರಿ.ಶ 1112 ರಲ್ಲಿ ರಚನೆಯಾಗಿದೆ. ಇದರ ನಂತರ ನಡುಗನ್ನಡದಲ್ಲಿ ಅನೇಕ ಕಥಾ ಕೃತಿಗಳು ಬೆಳೆದು ಬಂದಿವೆ. ಅವುಗಳೆಂದರೆ ಬ್ರಹ್ಮ ಶಿವನ 'ಸಮಯ ಪರಿಕ್ಷೆ' ಕ್ರಿ.ಶ 1350 ಚೌಡರಸನ 'ಅಭಿನವದಶಕುಮಾರ ಚರಿತ್ರೆ' ಕ್ರಿ.ಶ 1300 ದೇವರಾಜನ 'ಸೋಬಗಿನ ಸೋನೆ' ಕ್ರಿ.ಶ 1410ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ' ಕ್ರಿ. ಶ 1425 ಕುಮಾರವ್ಯಾಸನ 'ಕರ್ನಾಟ ಭಾರತ ಕಥಾ ಮಂಜರಿ' ಕ್ರಿ.ಶ 1430 ನೀಲಕಂಠ ಚಾರ್ಯನ –'ಆರಾಧ್ಯ ಚರಿತ್ರೆ' ಕ್ರಿ.ಶ 1445 ಸುರಂಗನ 'ತ್ರಿಶೇಷ್ಠಿ ಪುರಾತನ ಚರಿತ್ರೆ'

ಕ್ರಿ.ಶ 1510 ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತ ಪುರಾಣ' ಕ್ರಿ.ಶ. 1513 ನಂಜುಂಡ ಕವಿಯ 'ಕುಮಾರರಾಮನ ಕಥೆ' ಕ್ರಿ.ಶ 1525 ಗುರುಲಿಂಗ ವಿಭುವಿನ – 'ಭಿಕ್ಷಾಟನೆ ಚರಿತ್ರೆ' ಕ್ರಿ.ಶ 1534 ಕನಕ ದಾಸರ 'ರಾಮಧಾನ್ಯ ಚರಿತ್ರೆ' ಕ್ರಿ.ಶ–1515 ಹೆಳವನಕಟ್ಟಿ ಗಿರಿಯಮ್ಮನ 'ಚಂದ್ರಹಾಸನ ಕಥೆ' ಕ್ರಿ.ಶ 1750 ಜಗನ್ನಾಥದಾಸರ 'ಹರಿಕಥಾಮೃತಸಾರ' ಕ್ರಿ.ಶ–1775 ಮುಮ್ಮಡಿ ಕೃಷ್ಣರಾಜರ 'ಬತ್ತಿಸ ಪುತ್ಥಳಿಯ ಕಥೆ' ಕ್ರಿ.ಶ 1820 ಅಡಕಿ ಸುಬ್ಬರಾಯರ ಕಥಾ ಸಂಗ್ರಹ ಕ್ರಿ.ಶ. 1846 ಕೆಂಪುನಾರಾಯಣನ 'ಮುದ್ರಾಮಂಜೂಷ' ಕ್ರಿ.ಶ 1850 ಮಾನ್ವಿ ವೀರಪ್ಪನವರ 'ಕಥಾ ಸಾಗರ' (53 ಕಥೆಗಳ ಸಂಕಲನ) ಮುಂತಾದವುಗಳು. ಹೀಗೆ ಪ್ರಾಚೀನ ಕಾಲದಿಂದ ಹಿಡಿದು ನಡುಗನ್ನಡವರೆಗೆ ಅನೇಕ ಕಥೆಗಳ ಬೆಳೆದು ಬಂದಿವೆ.

## ಹೊಸಗನ್ನಡ ಕಥಾ ಸಾಹಿತ್ಯ ಪರಂಪರೆ :–

ಕನ್ನಡ ಸಾಹಿತ್ಯದಲ್ಲಿ 'ಕಥೆಗಳು' ಹೊಸದೇನು ಅಲ್ಲ ಪ್ರಾರಂಭದ ಜನಪದ ಕಥೆಗಳು ಪ್ರಾಚೀನ ಕನ್ನಡ ಕಥೆಗಳು, ನಡುಗನ್ನಡ ಕಾಲದ ಕಥೆಗಳು ಬೆಳೆದು ಬಂದಿವೆ. ಆದರೆ ಹೊಸಗನ್ನಡ ಕಾಲದ ಕಥೆಗಳು ಹೀಗೆ ಬೆಳೆದು ಬಂದಿವೆ. ಕಥೆಗಳು ಅಥವಾ ಸಣ್ಣ ಕಥೆಗಳು ಮಾತ್ರ ಇತ್ತಿಚಿನ ಕೊಡುಗೆಯಾಗಿದೆ. ಹೊಸಗನ್ನಡದ ಕಥೆಗಳು ಪಾಶ್ಚಾತ್ಯರ ಪ್ರೇರಣೆಯಿಂದ ಬೆಳೆದು ಬಂದಿವೆ. ಅಮೇರಿಕಾದ 'ಎಡ್ಗರ್ ಆಲನ್ ಫ್ಲೋ' ಎಂಬಾತನಿಂದ ರಚಿತವಾದ ಕಥಾ ಸಾಹಿತ್ಯ ಇಂದು ಜಗತ್ತನಾದ್ಯಾಂತ ಬೆಳೆದು ಹೆಮ್ಮರವಾಗಿ ನಿಂತಿದೆ. ಇದಕ್ಕೆ ಹೊಸಗನ್ನಡ ಕಥೆಗಳು ಹೊರತಾಗಿಲ್ಲ. ಇಂಗ್ಲೀಷ ಸಾಹಿತ್ಯ ಇಡಿ ಭಾರತಿಯ ಸಾಹಿತ್ಯದ ಮೇಲೆ ಪರಿಣಾಮ ಬಿರಿದಂತೆ ಕನ್ನಡ ಸಾಹಿತ್ಯದ ಮೇಲು ಪ್ರಭಾವ ಬಿರಿದೆ. ಪ್ರಾರಂಭದಲ್ಲಿ ಅನುವಾದ ಸಾಹಿತ್ಯದ ಮೂಲಕ ಪ್ರವೇಶ ಪಡೆದುಕೊಂಡು ಬರುಬರುತಾ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೋಂಡು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ

ನವೋದಯ ಪೂರ್ವಕ್ಕಿತಲೂ ಮೊದಲ ಕನ್ನಡದಲ್ಲಿ ಕಥೆಗಳು ಬೆಳೆದುಬಂದಿವೆ. ಕ್ರಿ.ಶ, 1846 ರಲ್ಲಿ ಅಡಕಿ ಸುಬ್ಬರಾಯರ 'ಕಥಾ ಸಂಗ್ರಹ' ಮತ್ತು 1851 ರಲ್ಲಿ ಮಾನ್ವಿ ವೀರಪ್ಪನವರ ಕಥಾ ಸಾಗರ ಕಥಾ ಸಂಕಲ ಪ್ರಕಟವಾಗಿವೆ. ಇವೆರಡು ಹೋಸಗನ್ನಡ ಸ್ವತಂತ್ರ ಮತ್ತು ಮೊದಲ ಕಥೆಗಳ ಸಂಗ್ರಹವೆಂದು ಡಾ: ಬಸವರಾಜ ಸಬರದ ಅವರ ವಾದವಾಗಿದೆ. ಕ್ರಿ.ಶ 1901 ರಲ್ಲಿ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿಯವರ 'ನನ್ನ ತಾಯಿ' ಕಥಾ ಸಂಕಲನ ಪ್ರಕಟವಾಯಿತು. 1900 ರಲ್ಲಿ ಕಥೆ ಬರೆಯಲು ಪ್ರಾರಂಭಿಸಿ ಪಂಜೆ ಮಂಗೇಶರಾಯರು 'ನನ್ನ ಚಿಕ್ಕತಾಯಿ' ನನ್ನ ಚಿಕ್ಕ ತಂದೆ' ಭಾರತ, ಶ್ರಾವಣ, ಕಮಲಾಪುರದ ಹೊಟೆಲನಲ್ಲಿ ಮುಂತಾದ ಕಥೆಗಳು ಸುವಾಸನಿ ಪತ್ರಿಕೆಯಲ್ಲಿ ಪ್ರಕಟವಾಗಿ ಕನ್ನಡ ಸಣ್ಣ ಕಥೆಗಳು ಖ್ಯಾತಿಗೆ ಪಾತ್ರವಾದವು. 1910 ರಲ್ಲಿ ಕಥೆ ಬರೆಯಲು ಪ್ರಾರಂಭಿಸಿ 'ಮಾಸ್ತಿ ಕನ್ನಡ ಆಸ್ತಿ' ಎಂಬ ಬಿರುದಿಗೆ ಪಾತ್ರರಾದ ಕಥೆ 'ರಂಗಪ್ಪನ ಮದುವೆ' ಪ್ರಕಟವಾಯಿತು. ಇದಾದ ಹತ್ತು ವರ್ಷಗಳ ನಂತರ (1920)ರಲ್ಲಿ ಕೇಲವು ಸಣ್ಣ ಕಥೆಗಳು ಎಂಬ ಕಥಾ ಸಂಕಲನ ಪ್ರಕಟವಾಯಿತು. ಇದೆ ಸಂದರ್ಭದಲ್ಲಿ ಕೆರೂರು ವಾಸುದೇವ ಚಾರ್ಯರ 'ಸಚಿತ್ರ ಭಾರತ' ಸುಭೋದಯ, ಪ್ರಕೃತಿ ಬಲ ಎಂಬ ಕಥೆಗಳು ಪ್ರಕಟವಾಗಿದ್ದವು. ಇವರ ನಂತರ ಎಂ.ಎನ. ಕಾಮತರು ಇಂಗ್ಲೀಷ ಪತ್ತೆದಾರಿ, ಷರ್ಲಾಕ ಹೋಮ್ಸ ನಾಯಕನ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಆದರೆ ಮಾಸ್ತಿ ವೆಂಕಟೇಶ ಅಯ್ಯಾಂಗಾರ ರವರ ಈ ಕಥಾ ಲೋಕವನ್ನು ಪ್ರವೇಶಮಾಡಿ ಸಣ್ಣ ಕಥೆಗೆ ಒಂದು ವಿಶಿಷ್ಟ ರೂಪ ನೀಡಿ ಸಣ್ಣ ಕಥೆಯನ್ನು ತನ್ನ ಸಾಹಿತ್ಯ ಪ್ರಕಾರವನ್ನಾಗಿ ಮಾಡಿದರು. ಆದ್ದರಿಂದ ಅವರನ್ನು 'ಮಾಸ್ತಿ ಕನ್ನಡದ ಆಸ್ತಿ' 'ಕನ್ನಡ ಸಣ್ಣ ಕಥೆಗಳ ಜನಕ'ರೆಂದು ಕರೆಯಲಾಯಿತು.

ಸಣ್ಣ ಕಥೆ ಎಂದರೇನು? ಸಣ್ಣ ಕಥೆಯ ಉಗಮ ವಿಕಾಸ ಅದರ ಸ್ವರೂಪ ಗುಣ ಲಕ್ಷಣಗಳನ್ನು ಕುರಿತು ಅಧ್ಯಾಯನ ಮಾಡಬೇಕಾದರೆ ಅಮೇರಿಕಾದ ಎಡ್ಗರ ಆಲನ್ ಪ್ಲೋ ಅವರಿಂದ ಹಿಡಿದು ಇತ್ತಿಚ್ಚಿನ ಕನ್ನಡದ ಅನೇಕ ವಿದ್ವಾಂಸರು ಸಣ್ಣ ಕಥೆ ಎಂದರೇನು? ಅದರ ಗುಣ ಲಕ್ಷಣಗಳ ಕುರಿತು ವಿವರಿಸಿದ್ದಾರೆ. 'ಎಡ್ಗರ ಆಲನ್ ಫ್ಲೋ ಅವರೇ ಹೇಳುವಂತೆ ಸಣ್ಣ ಕಥೆ ಎಂದರೆ ಅರ್ಧತಾಸಿನಿಂದ ಹಿಡಿದು ಒಂದು ಅಥವಾ ಎರಡು ತಾಸುಗಳಲ್ಲಿ ಓದಿ ಮುಗಿಸಬಹುದಾದ ಗದ್ಯಾತ್ಮಕ ಎಂದಿದ್ದಾರೆ. ಮುಂದುವರೆದು "ಸಣ್ಣ ಕಥೆಗಳು ವೃತ ಪತ್ರಿಕೆಗಳ ಕೂಸು"ಎಂದು ಕರೆದಿದ್ದಾರೆ.

ಕನ್ನಡದಲ್ಲಿ ಅನೇಕ ವಿದ್ವಾಂಸರು, ಸಾಹಿತಿಗಳು ಕೂಡ ಸಣ್ಣ ಕಥೆ ಎಂದರೇನು? ಅದರ ಸ್ವರೂಪ ಗುಣಲಕ್ಷಗಳ ಕುರಿತು ತಮ್ಮದೇ ಆದ ವ್ಯಾಖ್ಯಾನಗಳು ಕೋಟ್ಟಿದ್ದಾರೆ. ಅಂತಹದರಲ್ಲಿ ಕನ್ನಡದ ಬಹುದೋಡ್ಡ ಸಾಹಿತಿಗಳಾದ ಬೇಂದ್ರೆಯವರ ಒಬ್ಬರು. ಬೇದ್ರೆಯವರು ಸಣ್ಣ ಕಥೆಯ ಕುರಿತು "ಸಣ್ಣ ಕಥೆ ಅಲ್ಪ ಜಿವಿಗಳ ಮಹಾಕಾವ್ಯ"ಎಂದು ಕರೆದಿದ್ದಾರೆ. ಮಿರ್ಜಿ ಅಣ್ಣರಾಯರು ಸಣ್ಣ ಕಥೆ ಎಂದರೆ "ಶಕ್ಯವಿದ್ದಷ್ಟು ಕಡಿಮೆ ಪಾತ್ರಗಳ ನೆರವಿನಿಂದ ಒಳ್ಳೆಯ ಪರಿಣಾಮಕಾರಿಯಾಗುವಂತೆ ತೀರಾ ಸ್ವಲ್ಪ ಪ್ರಸಂಗಗಳಿಂದ ಒಂದು ಸಂಗತಿಯನ್ನು ಹೇಳುವುದು". ಕನ್ನಡದ ಬಹುದೋಡ್ಡ ಜನಪದ ಸಾಹಿತಿಗಳಲ್ಲಿ ಒಬ್ಬರಾದ ದೇಜಗೌರವರು ಸಣ್ಣ ಕಥೆಯ ಕುರಿತು ಹೀಗೆ ವ್ಯಾಖ್ಯನಿಸಿದ್ದಾರೆ. "ಹಿಂದಿನ ಕಥೆಗೂ, ಈಗಿನ ಸಣ್ಣ ಕಥೆಗೂ ರೂಪ ಸ್ವರೂಪಗಳಲ್ಲಿ ತುಂಬಾ ಅಂತರವಿದೆ. ಸಾಮಾನ್ಯವಾಗಿ ಒಂದು ವಸ್ತು ಪ್ರಧಾನವಾದುದೆಲ್ಲವೂ ಕಥೆ ಎಂಬ ಅಭಿಧಾನಕ್ಕೆ ಪಾತ್ರವಾಗುತ್ತಿತು. ಆದರೆ ಆಧುನಿಕ ಸಣ್ಣ ಕಥೆಯಲ್ಲಿ ವಿಷಯಕ್ಕಿಂತ ನಿರೂಪಣೆ, ವಸ್ತುವಿಗಿಂತ ವಸ್ತಿವಿನ ರಚನೆ, ಕಥೆಗಿಂತ ಕಥಾತಂತ್ರ, ವಿವರಣೆಗಿಂತ ಸಂಕ್ಷಿಪ್ತತೆ ಮುಖ್ಯ. ಅದೊಂದು ರಸಬಿಂದು ಆರಂಭದ ಸೌಂದರ್ಯ ಪರಿಣಾಮ ರಮಣಿಯತೆ ಹಿತಮಿತ ಸಾಧನ, ಅದರ ಗುರಿ ಮತ್ತು ಜೀವಾಳ" ಎಂದು ತಿಳಿಸುತ್ತಾರೆ. ಇಲ್ಲಿ ಪ್ರಾಚಿನ ಕಥೆಗಳಿಗೆ ಮತ್ತು ಹೋಸಗನ್ನಡ ಕಥೆಗಳಿಗಿರುವ ವ್ಯತ್ಯಾಸ ಸ್ವರೂಪ ಗುಣ ಲಕ್ಷಣಗಳು ಅತ್ಯಂತ ಸ್ಪಷ್ಟವಾಗಿ ತಿಳಿಸಿದ್ದಾರೆ.

ಇನ್ನು ಕಥೆ ಮತ್ತು ಕಾದಂಬರಿಗೂ ಇರುವ ವ್ಯತ್ಯಾಸವನ್ನು ಕುರಿತು ಅನೇಕರು ತಮ್ಮದೆ ಆದ ರಿತಿಯಲ್ಲಿ ಹೇಳಿದ್ದಾರೆ ಅಂತಹವರಲ್ಲಿ ಪ್ರಲ್ಹಾಹದ ಅಗಸನ ಕಟ್ಟಿಯವರು ಒಬ್ಬರು ಇವರು ಹೆಳುವಂತೆ ಸಣ್ಣ ಕಥೆ ಎಂದರೆ ಒನ್ ಡೇ ಕ್ರೀಕೇಟ ಗೇಮ ಇದ್ದ ಹಾಗೆ ಕಾದಂಬರಿಯಂದರೆ ಟೆಸ್ಟ ಕ್ರೀಕೆಟ ಗೇಮ ಇದ್ದ ಹಾಗೆ ಎಂದು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಸಣ್ಣ ಕಥೆಗೂ ಕಾದಂಬರಿಯ ನಡುವೆ ಇರುವ ವ್ಯತ್ತಾಸವೆಂದರೆ ಸಿಂಪಲ್ ಅಗಿ ಹೇಳಬೇಕೆಂದರೆ 'ಸಣ್ಣ ಕಥೆ' ಎಂದರೆ ಸತ್ತವನ ಸಾವಿನ ಸುದ್ದಿಯನ್ನು ಹೊತ್ತು ವಯ್ಯುವನ ಹಾಗೆ. 'ಕಾದಂಬರಿ' ಎಂದರೆ ಮುದುವೆಯ ದಿಬ್ಬಣ ಹೊರಟ ಹಾಗೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

**ನವೋದಯದ ಕಥಾ ಸಾಹಿತ್ಯ:–**

ನವೋದಯ ಪೂರ್ವದಲ್ಲಿ ಅನೇಕ ಕಥೆಗಾರರು ಕಥೆಗಳನ್ನು ಕುರಿತು ಈಗಾಗಲೆ ನೋಡಿದ್ದೆವೆ. ಈಗ ನವೋದಯದ ಕಥೆಗಳನ್ನು ಕುರಿತು ನೋಡೋಣ. ಪಂಜೆ ಮಂಗೇಶರಾಯರ 'ನನ್ನ ಚಿಕ್ಕ ತಾಯಿ, ಚಿಕ್ಕ ತಂದೆ, ಕೇರೂರ ವಾಸುದೇವಾಚಾರ್ಯರರ 'ಸಚಿತ್ರಭಾರತ'. ಎಂ.ಎಸ್.ಕಾಮತರ 'ಅಲೂರು' ಮಾಸ್ತಿಯವರ ಕೆಲವು ಸಣ್ಣ ಕಥೆಗಳು ನವೋದಯ ಕಥಾ ಸಾಹಿತ್ಯಕ್ಕೆ ಪ್ರೇರಣೆ ನಿಡಿದವು. ತದನಂತರ ದಕ್ಷಿಣದ ಕಡೆ ಎ.ಆರ್ ಕೃಷ್ಣಾ ಶಾಸ್ತ್ರಿ, ದೇವುಡು, ಎಂ.ಎ ಸೀತಾರಾಮಯ್ಯಾ, ಜಿ.ಪಿ ರಾಜರತ್ನಂ, ಗೋರೂರು ರಾಮಸ್ವಾಮಿ ಅಯ್ಯಾಂಗಾರ, ಬಾಗಲೋಡಿ ದೇವರಾಯ, ಆನಂದಕಂದ, ಅಶ್ವಥ, ಗೋವಿಂದರಾವ, ಎಸ್. ಎಂ ಮುನಿವೆಂಕಟಪ್ಪಾ, ಎಸ್.ಜಿ ಶಾಸ್ತ್ರಿ, ಮೊದಲಾದವರು ನವೋದಯದ ಕಥಾ ಸಾಹಿತ್ಯವನ್ನು ಬೆಳೆಸಿದರು.

ಉತ್ತರ ಕರ್ನಾಟಕದಲ್ಲಿ ನವೋದಯದ ಕಥಾ ಸಾಹಿತ್ಯವನ್ನು ಉಳಿಸಿಬೆಳೆಸಿದವರಲ್ಲಿ ಬೆಟಗೇರಿ ಕೃಷ್ಣಶರ್ಮ, ರಂ.ಶ್ರೀ ಮುಗಳಿ, ಕೃಷ್ಣಾಕುಮಾರ ಕಲ್ಲೂರ ಶ್ರೀನಿವಾಸ ಹಾವನೋರ, ದ.ಬಾ ಕುಲಕರ್ಣಿ, ಬೇಂದ್ರೆ, ನರಸಿಂಹಶಾಸ್ತ್ರಿ, ಎಲ್. ಎಸ್. ಶೇಷಾಗಿರಿರಾವ, ಚದುರಂಗ, ಹೀರೆಮಲ್ಲೂರು, ಈಶ್ವರ ಮೊದಲಾದವರು ಪ್ರಮುಖರಾಗಿದ್ದಾರೆ. ಮಾಸ್ತಿಯವರು ಕಥಾ ಪರಂಪರೆಯನ್ನು ಮುಂದುವರೆಸಿದವರು. ಅನಂದರು 'ನಾ ಕೊಂದ ಹುಡುಗಿ', 'ಚೋಚ್ಚಲ ಸಂಭ್ರಮ', 'ಮಾಟಗಾರ್ತಿ', ಹೆಂಡತಿಯ ಕಾಗದ, ಭವತಿ ಭಿಕ್ಷಾಂದೇಹಿ, ಮುಂತಾದವುಗಳು ವಸ್ತುವಿನ ದೃಷ್ಟಿಯಿಂದ ತುಂಬಾ ಮುಖ್ಯವಾಗಿವೆ.

**ಪ್ರಗತಿಶೀಲ ಕಥೆಗಳು:–**

ನವೋದಯದ ನಂತರ ಕಾಣಿಸಿಕೋಳ್ಳುವ ಸಾಹಿತ್ಯ ಘಟ್ಟವೆಂದರೆ ಅದು ಪ್ರಗತಿಶೀಲ ಘಟ್ಟ. ಈ ಕಾಲವಧಿಯಲ್ಲಿ ನವೋದಯಕ್ಕಿಂತ ಭಿನ್ನವಾದ ನೆಲೆಯಲ್ಲಿ ಪ್ರಗತಿಶೀಲ ಕಥೆಗಳು ಬೇಳೆದು ಬಂದವು. ದಲಿತ ಪರ ಕಾಳಜಿಯೊಂದಿಗೆ ಬೆಳೆದು ಬಂದ ಈ ಸಾಹಿತ್ಯದಲ್ಲಿ ಅವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಧ್ವನಿ ವ್ಯಕ್ತವಾಗಿ ಕಂಡುಬರುತ್ತದೆ. ಪ್ರಗತಿಶೀಲ ಚಳುವಳಿಯ ನೇತಾರ ಎಂದೇ ಹೆಸರು ಪಡೆದಿರುವ ಅ.ನ.ಕೃ. ಅದರೂ ಕೂಡ ಇವರ ನಂತರದಲ್ಲಿ ಬಂದ ನಿರಂಜನರ 'ರಕ್ತ ಸರೋವರ' ಮತ್ತು 'ಸಂಧಿಕಾಲ' ಎಂಬ ಎರಡು ಕಥಾ ಸಂಕಲನಗಳು ಪ್ರಕಟವಾದವು. ಇವರ ನಂತರ ತರಾಸು ಅವರ 0–0=0 ಬಸವರಾಜ ಕಟ್ಟಿಮನಿಯವರ 'ಗಿರಿಜಾ ಕಂಡ ಸಿನಿಮಾ' ಗೋರೂರು ರಾಮಸ್ವಾವಿ ಅಯ್ಯಾಂಗಾರ ಮಲ್ಲಿಗೆ ಹಳ್ಳಿಯ ಬಯಲಾಟ, ಬಾಗಲೋಡಿ ದೇವರಾಯರ ಸತ್ಯಮೇವ ಜಯತೆ, ಚದುರಂಗರ ಶಪಥಮನೆ, ರಾಮಚಂದ್ರರ ಸೆರಗಿನ ಕಂಡ ರಾಜಲಕ್ಷ್ಮಿ, ಎಚ್.ವಿ ಸಾವಿತ್ರಮ್ಮಾ, ಸರಸ್ವತಿಬಾಯಿ, ರಾಜವಾಡೆ, ತ್ರೀವೇಣಿ, ಎಂ.ಕೆ ಇಂದಿರಾ, ಅನುಪಮಾ ನಿರಂಜನ, ಉಷಾದೇವಿ, ವಾಣಿ, ಎಚ್.ಎಸ್ ಕಾತ್ಯಯನಿ ಮೊದಲಾದ ಮಹಿಳಾ ಕಥೆಗಾರ್ತಿಯರು, ಕಥೆಗಳು ಬರೆದಿದ್ದಾರೆ.

**ನವ್ಯ ಕಥೆಗಳು:–**

ನವ್ಯ ಕಥೆಗಾರರಿಗೆ ಹೋಸ ಪರಿಕಲ್ಪನೆ, ಬದಲಾವಣೆ ಸೂಚಿಸಿದ್ದವು. ಸಮಾಜ ಸಮಸ್ಯೆಗಿಂತ ವೈಯಕ್ತಿಕ ಸಮಸ್ಯೆಗಳಾದ ಆಸ್ಮಿಯತೆಯ ಶೋಧ, ಇವರನ್ನು ಅಕರ್ಷಿಸಿತ್ತು. ಈ ಸಿದ್ಧಾಂತದ ನೆಲೆಯಲ್ಲಿ ಕಥೆಗಳನ್ನು ಬರೆದವರಲ್ಲಿ ಯು. ಆರ್. ಅನಂತಮೂರ್ತಿಯವರು ಒಬ್ಬರು, ಇವರ ಪ್ರಕೃತಿ ನವಿಲಗಳು ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡವು. ನವ್ಯದ ಪ್ರಮುಖ ಕಥೆಗಾರರು ಎಂದರೆ ಪಿ.ಲಂಕೇಶ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ', ಶಾಂತಿನಾಥ ದೇಸಾಯಿ ಅವರ ಕ್ಷಿತಿಜ, ಗೂಡು, ಗಿರಡ್ಡಿ ಗೋವಿಂದರಾಜರ 'ಆ ಮುಖ ಈ ಮುಖಾ', ಯಶವಂತ ಚಿತ್ತಾಲರ ಆಟ, ಪೂರ್ಣಚಂದ್ರ ತೇಜಸ್ವಿಯವರ 'ಅಬಚೂರಿನ ಪೋಸ್ಟ ಆಫಿಸ್', ರಾಜಶೇಖರ ನೀರಮಾನ್ವಿಯವರ 'ಹಂಗಿನ ಅರಮನೆಯ ಹೊರಗೆ' ಮುಂತಾದವುಗಳು ನೋಡುತ್ತೆವೆ. ನವ್ಯದ 2ನೆ ಘಟ್ಟದಲ್ಲಿ ಸಣ್ಣ ಕಥೆಗಳು ಬರೆದವರಲ್ಲಿ ಜಯಂತ ಕಾಯ್ಕಣಿ, ಕೋಡೆಕಲ್ ರಾಮಚಂದ್ರದೇವ, ಮಹಾಬಲ ಮೂರ್ತಿ, ರಾಘವೆಂದ್ರ ಪಾಟೀಲ ಮುಂತಾದವರು.

**ದಲಿತ–ಬಂಡಾಯ ಕಥಾ ಸಾಹಿತ್ಯ:–**

ಕನ್ನಡ ಬಹುದೋಡ್ಡ ಮತ್ತು ಮಹತ್ವ ಪೂರ್ಣವಾದ ಘಟ್ಟವೆಂದರೆ, ಅದು ದಲಿತ ಬಂಡಾಯ ಘಟ್ಟ. ಈ ಕಾಲಘಟ್ಟದಲ್ಲಿ, ಸಮಾಜದ ಎಲ್ಲಾ ವರ್ಗದ ಜನರು ಸಾಹಿತ್ಯದಲ್ಲಿ ತಮ್ಮನು ಸಕ್ರೀಯವಾಗಿ ತೊಡಗಿಸಿಕೋಂಡು ಕಥೆಗಳನ್ನು ಬರೆದಿದ್ದು ಒಂದು

ವಿಶೇಷ. ಬಾಯಿ ಇಲ್ಲದವರಿಗೆ ಬಾಯಿ ಬೆಳೆದು ಬಂದ ಸಾಹಿತ ದಲಿತ–ಬಂಡಾಯ ಸಾಹಿತ್ಯ. ಈ ಸಾಹಿತ್ಯದ ಪ್ರಮುಖ ಕಥೆಗಾರರು ಎಂದರೆ, ಬರಗೂರು ರಾಮಚಂದ್ರಪ್ಪಾ, ಕಾಳೆಗಾಡ ನಾಗವಾರ 'ಬೆಟ್ಟದ ಸಾಲು ಮಳೆ ಅಲೆಗಳು', ಬೆಸಗರಹಳ್ಳಿ ರಾಮಣ್ಣ – ನೆಲದ ಒಡಲು, ಗರ್ಜನೆ, ಹರಕೆ ಹೋತ್ತ ನೆಲದ ಸಿರಿ, ಸುಗ್ಗಿ, ಒಂದು ಹುಡುಗನಿಗೆ ಬಿದ್ದ ಕನಸು, ಕನ್ನಂಬಾಡಿ, ಜಿ.ಎಸ್. ಸದಾಶಿವರಾಯರ ಮಗುವಾಗಿ ಬಂದವನು, ತುಣುಕುಗಳು ಕುಂವೀರಭದ್ರಪ್ಪನವರ ಇನ್ನಾದರೂ ಸಾಯಬೇಕು, ಚೋಮ ಮತ್ತು ಇತರ ಕಥೆಗಳು, ರಾಜಶೇಖರ ನೀರಮಾನ್ವಿ, ಚನ್ನಣ್ಣ ವಾಲಿಕರ, ಎಸ್. ಎಸ್. ಹಿರೆಮಠ, ಸತೀಶ ಕುಲಕರ್ಣಿ, ಹೀಗೆ ಹಲವಾರು ಹಲವು ಕಥೆಗಳನ್ನು ಬರೆದಿದ್ದಾರೆ. ಸುಮಾರು 70–80 ನೇ ಶತಮಾನದಲ್ಲಿ ಬಂಜೇಯರ ಮನೆಯಿಂದ ಹೋರಬಂದು ಪ್ರತ್ಯೇಕ ದಲಿತ ಸಾಹಿತ್ಯ ನಿರ್ಮೂಲನಕ್ಕೆ ಮುಂದಾಗಿ ದಲಿತ ಸಾಹಿತ್ಯ ಹುಟ್ಟಹಾಕಿ ಕಥೆಗಳನ್ನು ಬರೆದವರಲ್ಲಿ ದೇವನೂರ ಮಹಾದೇವ (ದ್ಯಾವನೂರು ಕಥಾ ಸಂಕಲನ) ಕನ್ನಡ ಸಾಹಿತ್ಯದಲ್ಲಿ ಎಲೆಮರಿಯ ಕಾಯಿಯಂತೆ ಇದ್ದು, ಸಮಜಮುಖಿಯಾದ ಸಾಹಿತ್ಯ ನಿರ್ಮಾಣ ಮಾಡಿದವರಲ್ಲಿ ಮೊದಲ ತಲೆಮಾರಿ ದಲಿತ ಸಾಹಿತಿಗಳು. ಜಿ. ವೆಂಕಟಯ್ಯನವರ ಮಂಗಳ ಮಾಂಗಲ್ಯ, ಕುಮಾರ ಕಕ್ಕಯ ಪೋಳ್ ರವರ ಸಮಾಜದ ತೋಡರಿಗೆ ಧರ್ಮದ ಕಗ್ಗಂಟು ಮುಂತಾದ ಕಥೆಗಾರರನ್ನು ಕಾಣುತ್ತೇವೆ. ದೇವನೂರು ಮಹಾದೇವರ ನಂತರ ದಲಿತ ಕಥಾ ಸಾಹಿತ್ಯದಲ್ಲಿ ಹೆಸರು ಪಡೆದಿರುವವರು ಮೋಗಳ್ಳಿ ಗಣೇಶ ಬುಗರತ್ತ ಭೂಮಿ, ಎಚ್. ಟಿ ಪೋತೆ ಚಮ್ಮಾವುಗೆ, ಬೆತ್ತಲಾದ ಚಂದ್ರ, ಅರವಿಂದ ಮಾಲಗತ್ತಿಯವರ ಮುಗಿಯದ ಕಥೆಗಳು, ಮುಳ್ಳುರು ನಾಗರಾಜರ ನೆಂಗಳರ ಮನುಜರವರ ಬುರುಡೆಗೆ ಸ್ವರ್ಣ, ಬಿ.ಟಿ ಲಿಲಿತಾ ನಾಯಕರ ಹಬ್ಬ ಮತ್ತು ಬಲಿ, ಸೋಮಣ್ಣ ಹೋಂಗಳಿಯ ತಮಟೆ ಮುಂತಾದವುಗಳು ಮುಖ್ಯವಾಗಿವೆ. ಈ ರೀತಿಯಾಗಿ ಕನ್ನಡದಲ್ಲಿ ಕಥಾ ಸಾಹಿತ್ಯ ಪರಂಪರೆ ಬೆಳೆದು ಬಂದಿದೆ.

**ಪರಾಮರ್ಶನ ಗ್ರಂಥಗಳು:**


1) ಡಾ. ಬಿ.ಎಲ್. ಸುಭಾಷ: ಕಥಾ ಸಾಹಿತ್ಯ ಜಾನಪದ ಜೈನ ಕಥೆಗಳು, 2020
2) ಡಾ. ಬಿ.ಎಸ್. ಸ್ವಾಮಿ: ಕಥಾ ಸಾಹಿತ್ಯ, ಚೇತನ ಬುಕ್ ಹೌಸ್, 2015
3) ಹಂಪಾ. ನಾಗರಾಜಯ್ಯ: ಪ್ರಾಕೃತ ಕಥಾ ಸಾಹಿತ್ಯ, ಸಪ್ನಾ ಬುಕ್ ಹೌಸ್, ಬೆಂಗಳೂರು.
4) ಸಿಂಪಿ ಲಿಂಗಣ್ಣಾ: ಉತ್ತರ ಕರ್ನಾಟಕದ ಜನಪದ ಕಥೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು, 2019
5) ವಿಜಯ: ಸಣ್ಣ ಕಥೆಗಳ ಸೊಗಸು
6) ಎಸ್. ದಿವಾಕರ: ಶತಮಾನದ ಸಣ್ಣ ಕಥೆಗಳು, ಪ್ರಿಸಮ್ ಬುಕ್ ಹೌಸ್, ಬೆಂಗಳೂರು, 2019